ದಿನಾಂಕಃ 30.10.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀಸವಾಲುಃ ವಾದಿಗಳ ಪರ ವಕೀಲರಿಂದಃ

ಈ ದಾವೆಯನ್ನು ರಾಜಿ ಮಾಡಿಕೊಳ್ಳುವ ಉದ್ದೇಶದಿಂದ ಹಾಕಲಾಗಿದೆ ಎಂದರೆ ಸರಿ. ದಾವಾ ಆಸ್ತಿ ನಂ.1 ನನಗೆ ಮತ್ತು 2 ನೇ ಆಸ್ತಿ ವಾದಿಯರಿಗೆ ಎಂದು ರಾಜಿಯಾಗಿತ್ತು ಎಂದರೆ ಸರಿ. ಅದು ಯಾವ ಕಾರಣಕ್ಕಾಗಿ ಮುರಿಯಿತು ಎಂದರೆ ಸಾಕ್ಷಿ ವಾದಿಗಳೇ ಕೊಟ್ಟಿದ್ದು, ಅವರೇ ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ. ರಾಜಿ ಮುರಿದಿರುವುದಕ್ಕೆ ಕಾರಣ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಶಿಕ್ಷಕರಾಗಿದ್ದರು ಎಂದರೆ ಸರಿ. ಅವರು 2008 ರಲ್ಲಿ ಮೃತಪಟ್ಟಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಂದೆ ಖರೀದಿ ಮಾಡಿರುವ ಆಸ್ತಿಗಳು ಎಂದರೆ ಸರಿ. ನನ್ನ ಅಜ್ಜನಿಂದ ಬಂದ ಆಸ್ತಿಗಳು ಯಾವು ಇಲ್ಲ ಎಂದರೆ ಸರಿ. ನನ್ನ ಸಹೋದರ ಜಗದೀಶರವರು ಮೃತಪಟ್ಟಿದ್ದಾರೆ ಎಂದರೆ ಸರಿ. ಅವರಿಗೆ ಮದುವೆ ಆಗಿರಲಿಲ್ಲ ಎಂದರೆ ಸರಿ. ನನ್ನ ತಾಯಿ 2019 ರಲ್ಲಿ ಮೃತಪಟ್ಟಿದ್ದಾರೆ ಎಂದರೆ ಸರಿ. ನನ್ನ ತಂದೆ ತಾಯಿಗೆ ನಾನು ಮತ್ತು ವಾದಿಗಳು ಮಾತ್ರ ವಾರಸಾದಾರರು ಎಂದರೆ ಸರಿ.

2. ನನ್ನ ತಂದೆ ಮತ್ತು ತಾಯಿ ಮೃತಪಟ್ಟ ನಂತರ ಆಸ್ತಿಗಳು ಖಾತೆಯನ್ನು ಸಂಭಂದಪಟ್ಟ ಕಛೇರಿಗಳಿಗೆ ನಾನೇ ಓಡಾಡಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಈ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಮಹಾಂತೇಶರವರು 1985 ರಲ್ಲಿ ಎ.ಪಿ.ಎಮ್.ಸಿ ಯಲ್ಲಿ ಗ್ರೇಡರ್ ಆಗಿ ಕೆಲಸಕ್ಕೆ ಸೇರಿದರು ಎಂದರೆ ಸರಿ. ನನ್ನ ತಂಗಿಯ ಮದುವೆ 1999 ರಲ್ಲಿ ಆಗಿದೆ ಎಂದರೆ ಸರಿ. ಅವರ ಗಂಡ ಅಶೋಕರವರು ಹೆಸ್ಕಾಮ್ ನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನನ್ನ ತಂಗಿಯನ್ನು ಮದುವೆ ಮಾಡಿಕೊಟ್ಟಾಗ ಅವರು ನೌಕರಿಯಲ್ಲಿ ಇದ್ದರು. ನಿಮ್ಮ ತಂಗಿಯ ಗಂಡನ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಇದೆ ಎಂದರೆ ಸಾಕ್ಷಿ ಈಗ ಚೆನ್ನಾಗಿ ಇದೆ, ಮೊದಲು ಚೆನ್ನಾಗಿ ಇರಲಿಲ್ಲ ಎನ್ನುತ್ತಾರೆ. ಮೊದಲು ಸಹ ಅವರ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದು, ನಾನು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲು ಸಿವಿಲ್ ವರ್ಕ್ ಮಾಡುತ್ತಿದ್ದೆ, ಈಗ 5 ವರ್ಷಗಳಿಂದ ಬಿಟ್ಟಿದ್ದೇನೆ. ಮೊದಲು ನಾನು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುತ್ತಿದ್ದೆ, ವರ್ಷಗಳಿಂದ ಸಲ್ಲಿಸುತ್ತಿಲ್ಲ. ನನ್ನ ಕಾಂಟ್ರ್ಯಾಕ್ಟ್ ಕೆಲಸಕ್ಕೆ ನನ್ನ ತಂದೆ 20 ಲಕ್ಷ ಹಣ ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತವಿರುವಾಗ ನಾನು ಒಂದು ಎಲೆಕ್ಟ್ರಿಕಲ್ಸ್ ಶಾಪ್‌ನ್ನು ತೆರೆದಿದ್ದೆ ಎಂದರೆ ಸರಿ. ಅದಕ್ಕೆ ಬಂಡವಾಳ ಹಾಕಲು ನನ್ನ ತಂದೆ ನನಗೆ 3 ಲಕ್ಷ ಹಣ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆದಾದ ನಂತರ ನಾನು ಒಂದು ಐಸ್ ಕ್ರಿಮ್ ಅಂಗಡಿಯನ್ನು ತೆರೆದಿದ್ದೆ ಎಂದರೆ ಸರಿಯಲ್ಲ. ಇದಕ್ಕೂ ಸಹ ನನ್ನ ತಂದೆ 1 ಲಕ್ಷ ಹಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಮಾಡುವ ಪ್ರತಿ ಕೆಲಸಕ್ಕೂ ನನ್ನ ತಂದೆಯವರು ಹಣ ಕೊಟ್ಟಿದ್ದರೂ ಸಹ ನಾನು ಕೊಟ್ಟಿಲ್ಲವೆಂದು ಸುಳ್ಳುಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ತಂದೆಯವರು ಮತ್ತು ತಾಯಿಯವರು ನಿಮಗೆ ಕಾರ್ ಮತ್ತು ಮೋಟಾರ್ ಸೈಕಲ್ ನ್ನು ಖರೀದಿ ಮಾಡಲು 5 ಲಕ್ಷ ಹಣ ಕೊಟ್ಟಿದ್ದಾರೆ ಎಂದರೆ ಸಾಕ್ಷಿ 5 ರೂಪಾಯಿಗಳನ್ನು ಸಹ ಕೊಟ್ಟಿಲ್ಲ ಎನ್ನುತ್ತಾರೆ. ಸದರಿ ವ್ಯವಹಾರಗಳಿಗೆ ಹಣ ನಿಮಗೆ ಎಲ್ಲಿಂದ ಬಂತು ಎಂದರೆ ಸಾಕ್ಷಿ ನನ್ನ ತಂದೆ ಹೊಲ ಮಾರಿದ್ದು, ಅದರಲ್ಲಿ 1 ಲಕ್ಷ ಹಣ ಕೊಟ್ಟಿದ್ದು, ಅದನ್ನು ಅವುಗಳಿಗೆ ಬಳಸಿಕೊಂಡಿದ್ದೇನೆ ಎನ್ನುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ